ಪರಿಹಾರವನ್ನು ಕೊಡಲೇಬೇಕಾಗುತ್ತದೆ. ಎಕ್ಸ್‌ಗ್ರೇಷಿಯಾ ಸಿಚ್ಯುಯೇಷನ್ ಕ್ರಿಯೇಟ್ ಆದಾಗ ಸರ್ಕಾರ ಸಹಾಯ ಮಾಡಲೇಬೇಕಾಗುತ್ತದೆ. ಅಂಥಾ ಪರಿಸ್ಥಿತಿ ಇವತ್ತು ಬೀದರ್ ಮತ್ತು ಗುಲ್ಬರ್ಗಾದಲ್ಲಿ ಆಗಿದೆ. ಆದುದರಿಂದ ತೊಗರಿ ಬೆಳೆಗಾರರಿಗೆ ಆಗಿರತಕ್ಕಂಥ ನಷ್ಟವನ್ನು ತುಂಬಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಅಗ್ರಿಕಲ್ಚರಲ್ ಮಿನಿಸ್ಟರ್ ಜೊತೆ ಮಾತನಾಡಿ, ನಾಳೆ ದಿವಸ ಸದನದಲ್ಲಿ ಉತ್ತರ ಕೊಡಲಾಗುತ್ತದೆ.

12.40 ಪಿ.ಎಂ

MR. SPEAKER: Mr. P.G.R.Sindhia is in-charge of Mines and Geology portfolio. He has got some business in the Legislative council. He has sent the information. ಅವರು ಬರಲಿಕ್ಕೆ ಸ್ವಲ್ಪ ಸಮಯ ಆಗಬಹುದು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಸಂಬಂಧಪಟ್ಟ ಸಚಿವರು ವಿಧಾನಪರಿಷತ್‌ನಲ್ಲಿನ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದ್ದು ಅದಾದ ಮೇಲೆ ಇಲ್ಲಿಗೆ ಬರುತ್ತಾರೆ. ಆದುದರಿಂದ ಗಮನಸೆಳೆಯುವ ಸೂಚನೆಯನ್ನು ಅವರು ಬಂದ ಮೇಲೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಚುನಾವಣಾ ಪ್ರಸ್ತಾವನ್ನು ಮೂವ್ ಮಾಡೋಣ. ಅವರು ಬಂದ ತತ್‌ಕ್ಷಣ ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

(3) ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖಾ ಮಂತ್ರಿಗಳ ಪರವಾಗಿ ಈ ಪ್ರಸ್ತಾವ ಮಂಡಿಸಲು ಅನುಮತಿ ಕೋರುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೆ,

"1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳ ಅಧಿನಿಯಮ 18(8) ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ

ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ''

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಮಾನ್ಯ ಖಿರ್ಗೆಯವರು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಸಚಿವರು ಬಂದಮೇಲೆ ತೆಗೆದುಕೊಳ್ಳೋಣ. ಮಾನ್ಯ ಸಿಂಧ್ಯಾರವರು ಆ ಪೋರ್ಟ್‌ಫೋಲಿಯೋಕ್ಕೆ ಸಂಬಂಧಪಟ್ಟವರು. ಅವರು ಬರುವ ತನಕ ತಾವುಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. As soon as he comes, we sill stop it there and take-up the calling Attention Notice. ಆಮೇಲೆ ಈಗ ಅಪೂರ್ಣವಾದುದನ್ನು ಕಂಟಿನ್ಯೂ ಮಾಡಬಹುದು. ವರ್ಕಿಂಗ್ ಅರೇಂಜ್‌ಮೆಂಟ್ ತಾವು ಶುರುಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ: ವರ್ಕಿಂಗ್ ಅರೇಂಜ್‌ಮೆಂಟ್ ಅಂದರೆ ಇದರ ಮಹತ್ವ ಹೋಗುತ್ತದೆ ಎಂದು ಹೇಳಬೇಕಾಗುತ್ತದೆ. ಆ ವಿಷಯಕ್ಕೆ ಸದನವೇ ಮಹತ್ವ ಕೊಡಬೇಕಾಗುವಂಥಾದ್ದು ಇದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆಗೆ ಸರಕಾರವು ಉತ್ತರ ಕೊಡಲು ತಯಾರಾಗಿದೆ. ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿ ತಮ್ಮ ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೊಡತಕ್ಕಂಥಾದ್ದು ಇದೆ. ಅದು ಮುಗಿದ ಕೂಡಲೇ ಇಲ್ಲಿ ಬಂದು ತಮಗೆ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು: ತಾವುಗಳು ರಾಜ್ಯಪಾಲರ ಭಾಷಣದ ಮೇಲೆ ಮಾತನ್ನು ಪ್ರಾರಂಭಿಸಿ ಅಥವಾ ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖಿರ್ಗೆ: ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡುವ ವಿಚಾರ ಬೇರೆ. ನಾನು ಗಮನಸೆಳೆಯುವ ಸೂಚನೆಯ ಬಗ್ಗೆ ಏಕೆ ಹೇಳಿದ್ದೇನೆಂದರೆ ವಿಷಯದ ಮಹತ್ವದ ದೃಷ್ಟಿಯಿಂದ ಮತ್ತು ಇವೊತ್ತು ಗಣಿ ಇಲಾಖೆಯಲ್ಲಿ ಅವ್ಯವಹಾರಗಳು ನಡೆಯುತ್ತಿದೆ, ಅದನ್ನು ಸದನದ ಮತ್ತು ಸರಕಾರದ ಗಮನಕ್ಕೆ ತರಬೇಕೆನ್ನುವುದು ಮುಖ್ಯ. ಆದ್ದರಿಂದ ಆಮೇಲೆ ಮಧ್ಯಾಹ್ನ ತೆಗೆದುಕೊಳ್ಳುತ್ತೇವೆ ಅಂದರೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನ್ನು ಪ್ರಾರಂಭಿಸುತ್ತೇನೆ.

ಅಧ್ಯಕ್ಷರು: ಇಲ್ಲಿ ಆಮೇಲೆ ಎನ್ನುವಂಥ ಪ್ರಶ್ನೆ ಇಲ್ಲ. ಸಿಂಧ್ಯಾರವರು ಇಲ್ಲಿಗೆ ಬಂದ ತತ್‌ಕ್ಷಣವೇ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.